100 (168) ಶ್ರೀ ಸಿಂಧೂರ ಜಿ.ರಾಜಶೇಖರ (ಶಿಗ್ಗಾಂವ್) :– ಮಾನ್ಯ ಪಶುಸಂಗೋಪನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಗ್ಗಾಂವ್ ತಾಲ್ಲೂಕಿನ ಬಂಕಾಪುರ ಪಟ್ಟಣದ ಖಿಲಾರಿ ತಳಿ ಸಂವರ್ಧನ ಕೇಂದ್ರದಲ್ಲಿ ಹಾಗೂ ಕೋಟೆ ಆವರಣದಲ್ಲಿ ಜಾನುವಾರುಗಳಿಗೆ ಕೊಟ್ಟಿಗೆಯ ಕೊರತೆ, ರಸ ಮೇವಿನ ಗುಂಡಿಗಳು ಹಾಳಾಗಿ ಹೋಗಿರುವುದು ಮತ್ತು ಮೇವು ಸಂಗ್ರಹಕ್ಕೆ ಚಾವಣಿ ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂಕಾಪುರ ಕೋಟೆ ಆವರಣದಲ್ಲಿ 120 ಜಾನುವಾರುಗಳಿದ್ದರೂ ಕೇವಲ 90 x 30 ಅಡಿ ಅಳತೆಯ ಒಂದು ಕೊಟ್ಟಿಗೆ ಹಾಗೂ 20 x 30 ಅಡಿ ಅಳತೆಯ ಎರಡು ಸಣ್ಣ ಕೊಟ್ಟಿಗೆಗಳು ಮಾತ್ರ ಇರುವುದರಿಂದ ಜಾನುವಾರುಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನದಲ್ಲಿದೆಯೇ;

ಇ) ಬಂಕಾಪುರ ಕೋಟೆ ಆವರಣದಲ್ಲಿ ಸನ್ 1919ರಲ್ಲಿ ಕಲ್ಲು ಮಣ್ಣಿನಿಂದ ಕಟ್ಟಿದ ರಸ ಮೇವಿನ ಗುಂಡಿಗಳಿದ್ದು ಇವುಗಳು ಸಂಪೂರ್ಣ ಹಾಳಾಗಿ ಹೋಗಿದ್ದು, ರಸಮೇವು ಸಂಗ್ರಹಣೆ ಮಾಡಲು ಬಾರದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಬಂಕಾಪುರ ಕೋಟೆಯಲ್ಲಿ ಡಿ ದರ್ಜೆ ಸಿಬ್ಬಂದಿ ಕೊರತೆ ತುಂಬಾ ಇದ್ದು, ಪ್ರಗತಿ ಸಾಧಿಸಲಿಕ್ಕೆ ಹಾಗೂ ದೈನಂದಿನ ಚಟುವಟಿಕೆಗಳಿಗೆ ತುಂಬಾ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಹಾಗಿದ್ದಲ್ಲಿ, ಹೊಸ ಜಾನುವಾರು ಕೊಟ್ಟಿಗೆ ನಿರ್ಮಾಣ ಮಾಡಲು, ರಸ ಮೇವಿನ ಗುಂಡಿಗಳನ್ನು ನಿರ್ಮಿಸಲು, ಡಿ ದರ್ಜೆ ಸಿಬ್ಬಂದಿ ನೇಮಕ ಮಾಡಲು ಹಾಗೂ ಮೇವು ಸಂಗ್ರಹಗಾರ ನಿರ್ಮಾಣಕ್ಕೆ ಸರ್ಕಾರ ಯಾವಾಗ ಕ್ರಮಕೈಗೊಳ್ಳುತ್ತದೆ?

ಶ್ರೀ ರೇವೂ ನಾಯಕ್ ಬೆಳಮಗಿ (ಪಶುಸಂಗೋಪನೆ ಸಚಿವರು) :

ಅ) ಬಂದಿದೆ.

ಆ) ಬಂದಿದೆ.

ಇ) ಬಂದಿದೆ.

ಈ) ಬಂದಿದೆ.

ಉ) ಹಾಲಿ ಕ್ಷೇತ್ರದಲ್ಲಿರುವ ಜಾನುವಾರುಗಳ ಪೈಕಿ ಕೆಲವು ಜಾನುವಾರುಗಳನ್ನು ವಾರ್ಷಿಕ ವಿಲೇವಾರಿ ಮಾಡಿದ ನಂತರ ಉಳಿದ ಜಾನುವಾರುಗಳಿಗೆ ಮತ್ತು ಇತರೆ ಕಾಮಗಾರಿಗಳನ್ನು ಅನುದಾನದ ಲಭ್ಯತೆಗನುಗುಣವಾಗಿ ತೆಗೆದುಕೊಳ್ಳಲಾಗುವುದು.

'ಡಿ' ದರ್ಜೆ ನೌಕರರ ಹುದ್ದೆಗಳ ಸಾಕಷ್ಟು ಸಂಖ್ಯೆಯಲ್ಲಿ ಸದರಿ ಕ್ಷೇತ್ರಕ್ಕೆ ಸೃಷ್ಟಿಸಿಲ್ಲವಾದ ಕಾರಣ ದೈನಂದಿನ ಮತ್ತು ಋತುಮಾನ ಕೆಲಸಗಳನ್ನು ದರಗುತ್ತಿಗೆ ಕೆಲಸದ ಆಧಾರದ ಮೇಲೆ ನಿರ್ವಹಿಸಲಾಗುತ್ತಿದೆ.

545 ಶ್ರೀ ವೆಂಕಟಮುನಿಯಪ್ಪ ಬಿ.ಪಿ., ಶಾಸಕರು (ಬೇತಮಂಗಲ) ;– ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಬಂಗಾರಪೇಟೆ ಪಟ್ಟಣದಲ್ಲಿರುವ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯರ ಹುದ್ದೆಗಳು ಖಾಲಿ ಇರುವುದರಿಂದ ಬಡ ಜನತೆ ತೀವ್ರ ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಮದಿದೆಯೇ;

2) ಹಾಗಿದ್ದಲ್ಲಿ, ಈ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು;

3) ಇಲ್ಲವಾದಲ್ಲಿ, ಈ ಹುದ್ದೆಗಳನ್ನು ತುಂಬಲು ಸರ್ಕಾರದ ಮುಂದಿರುವ ಅಡಚಣೆಗಳು ಯಾವುವು?

ಶ್ರೀ ಆರ್.ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

1) ಬಂದಿದೆ.

2) ಸಾರ್ವಜನಿಕ ಆಸ್ಪತ್ರೆ, ಬಂಗಾರಪೇಟೆ ಇಲ್ಲಿಗೆ ದಂತ ಆರೋಗ್ಯಾಧಿಕಾರಿ ಸೇರಿ ಒಟ್ಟು 5 ಹುದ್ದೆಗಳು ಮಂಜೂರಾಗಿದ್ದು, ಈ ಹುದ್ದೆಗಳಲ್ಲಿ 2 ಪಿಪಿಸಿ ಹುದ್ದೆಗಳು ರದ್ದಾಗಿವೆ. ಹಾಲಿ 2 ತಜ್ಞ ಹುದ್ದೆಗಳಲ್ಲಿ ಒಬ್ಬರು ದಿನಾಂಕ : 21/7/2006 ರಂದು ನಿವೃತ್ತಿ ಹೊಂದಿರುತ್ತಾರೆ. ಹಾಲಿ ಒಬ್ಬರು ವೈದ್ಯರಿದ್ದು ಮತ್ತೊಬ್ಬರು ಸ್ತ್ರೀರೋಗ ತಜ್ಞರನ್ನು ಅನ್ಯಪರ ಸೇವೆಯ ಮೇಲೆ ತಾತ್ಕಾಲಿಕವಾಗಿ ನೇಮಿಸಲಾಗಿದೆ.

3) ಜಿಲ್ಲಾ ವ್ಯಾಪ್ತಿಯಲ್ಲಿ ಖಾಲಿ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಿಕೊಳ್ಳಲು ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆ. ಅಲ್ಲದೆ ಇಲಾಖೆಯಿಂದ